ಅಭಿಯಾಚನೆ ಕ್ರಮಾಂಕ ೯—ಲೇಖನ ಸಾಮಗ್ರಿ ಮತ್ತು ಮುದ್ರಣ ಇತ್ಯಾದಿ

೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಲೇಖನ ಸಾಮಗ್ರಿ ಮತ್ತು ಮುದ್ರಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೮೬,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೧೦—ಉಚ್ಚ ಶಿಕ್ಷಣ

೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಉಚ್ಚ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೭೧,೬೯,೦೦೦ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫೫,೦೦.೦೦೦ ರೂ. ಗಳಿಗಿಂತ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೧೪—ಸೆಕೆಂಡರಿ ಶಿಕ್ಷಣ

೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸೆಕೆಂಡರಿ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೧೩,೮೮,೦೩,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೧೩—ಪ್ರಾಥಮಿಕ ಮತ್ತು ವಯಸ್ಕರ ಶಿಕ್ಷಣ

೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪ್ರಾಥಮಿಕ ಮತ್ತು ವಯಸ್ಕರ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೫೦,೯೩,೨೩,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೭ ೦೧,೧೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ ಮಂಜೂರು ಮಾಡುವುದು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ನೀಡಲಾದ ಬಾಯಿಮಾತಿನ ಉತ್ತರಗಳು.

ಅಧ್ಯಕ್ಷರು.—ಆರ್. ರೋಶನ್ ಬೇಗ್‌ರವರ ಪ್ರಶ್ನೆಯನ್ನು ಆಮೇಲೆ ತೆಗೆದುಕೊಳ್ಳೋಣ. ಮುಂದಿನ ಪ್ರಶ್ನೆ, ವಿನಯಕುಮಾರ್ ಸೊರಕೆಯವರದ್ದು.

ಪುತ್ತೂರು ತಾಲ್ಲೂಕಿನಲ್ಲಿ ಗರ್ಭಿಣಿ ಸ್ತ್ರೀಯರಿಗೆ ಹೆರಿಗೆ ಭತ್ಯವನ್ನು ನೀಡುವ ಬಗ್ಗೆ.

೧೨೩೭. **ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು).**—ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪುತ್ತೂರು ತಾಲ್ಲೂಕಿನಲ್ಲಿನಲ್ಲಿ ಗರ್ಭಿಣಿ ಸ್ತ್ರೀಯರಿಗೆ ಹೆರಿಗೆ ಭತ್ಯವನ್ನು ಎಷ್ಟು ಜನ ಸ್ತ್ರೀಯರಿಗೆ ನೀಡಲಾಗಿದೆ ?

ಆ) ಇದಕ್ಕೆ ಖರ್ಚಾದ ಹಣವೆಷ್ಟು ?

ಇ) ಇದರ ಬಗ್ಗೆ ಹೆಚ್ಚಿನ ತಿಳುವಳಿಕೆ ಜನ ಸಾಮಾನ್ಯರಿಗೆ ತಿಳಿಯುವಂತೆ ಪ್ರಚಾರ ಮಾಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ನೀಡಲು ಸರ್ಕಾರದವರು ಉದ್ದೇಶಿಸಿರುವರೆ ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ೧೯೮೪-೮೫ನೇ ಸಾಲಿನಲ್ಲಿ ೪೪ ಜನ ಗರ್ಭಿಣಿ ಸ್ತ್ರೀಯರಿಗೆ ಮತ್ತು ೧-೪-೧೯೮೫ ರಿಂದ ೩೧-೧೨-೧೯೮೬ ರವರೆಗೆ ೧೪೯ ಗರ್ಭಿಣಿ ಸ್ತ್ರೀಯರಿಗೆ ಹೆರಿಗೆ ಭತ್ಯೆ ನೀಡಲಾಗಿದೆ.

ಆ) ೧೯೮೪-೮೫ನೇ ಸಾಲಿನಲ್ಲಿ ೧೩,೨೦೦-೦೦ ರೂಪಾಯಿಗಳನ್ನು ಮತ್ತು ೧-೪-೧೯೮೫ ರಿಂದ ೩೧-೧೨-೧೯೮೬ ರವರೆಗೆ ೪೪,೨೦೦-೦೦ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ.

ಇ) ಹೌದು.

ಇಲಾಖೆಯ ಎಲ್ಲಾ ಯೋಜನೆಗಳ ಬಗ್ಗೆ ಅಂದರೆ ಹೆರಿಗೆ ಭತ್ಯೆ ಯೋಜನೆಯನ್ನು ಒಳಗೊಂಡಂತೆ ಆಕಾಶವಾಣಿ, ಸ್ಥಳೀಯ ವಾರ್ತಾ ಪತ್ರಿಕೆಗಳು ಮತ್ತು ಆರೋಗ್ಯ ಪೌಷ್ಟಿಕ ಆಹಾರ ಶಿಬಿರಗಳ ಮೂಲಕ ಪ್ರಚಾರ ಮಾಡಲು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸೂಚನೆಯನ್ನು ಕೊಡಲಾಗಿದೆ.

ಶ್ರೀ ವಿನಯಕುಮಾರ್ ಸೊರಕೆ.—ಪುತ್ತೂರು ತಾಲ್ಲೂಕಿನಲ್ಲಿ ಗರ್ಭಿಣಿ ಸ್ತ್ರೀಯರಿಗೆ ಕೊಡುವಲ್ಲಿ ಒಟ್ಟು ಎಷ್ಟು ಖರ್ಚು ಆಗಿದೆ ಮತ್ತು ಅದಕ್ಕೆ, ಇಷ್ಟೆಂತಹ ಮೊತ್ತ ಎಷ್ಟು ಎಂದು ಕೇಳಿದ್ದೇನೆ. ಹಾಗೂ ಇದರ ಬಗ್ಗೆ ಹೆಚ್ಚಿನ ತಿಳುವಳಿಕೆ ಜನ ಸಾಮಾನ್ಯರಿಗೆ ಕೊಡಲಿಕ್ಕೆ, ಪ್ರಚಾರಕ್ಕಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶವನ್ನು ನೀಡಿದ್ದಾರೆಯೇ ಎಂದು ಕೇಳಿದ್ದೇನೆ, ಅದಕ್ಕೆ ಇಲಾಖೆಯ ಎಲ್ಲಾ ಯೋಜನೆಗಳ ಬಗ್ಗೆ ಹೆರಿಗೆ ಭತ್ಯೆ ಯೋಜನೆಯನ್ನು ಒಳಗೊಂಡಂತೆ, ಆಕಾಶವಾಣಿ ಸ್ಥಳೀಯ ವಾರ್ತಾ ಪತ್ರಿಕೆಗಳು, ಮುಂತಾದವುಗಳಿಂದ ಪ್ರಚಾರ ಮಾಡಲಿಕ್ಕೆ ಉದ್ದೇಶಿಸಲಾಗಿದೆ ಎಂದು ಕೊಟ್ಟಿದ್ದಾರೆ.

ಹೆರಿಗೆ ಭತ್ಯೆಯನ್ನು ಕೃಷಿ ಕೂಲಿಗಾರರಿಗೆ, ದುರ್ಬಲವರ್ಗದವರಿಗೆ, ಮತ್ತು ಕಾರ್ಮಿಕರಿಗೆ ಕೊಡುತ್ತಾ ಇದ್ದೀರಿ. ಆದರೆ ಪುತ್ತೂರು ತಾಲ್ಲೂಕಿಗೆ ಹೊಂದಿಕೊಂಡು, ಆರೋಗ್ಯ, ಪೌಷ್ಟಿಕ ಆಹಾರ ಅಂಗನವಾಡಿ, ಇತ್ಯಾದಿ ಸೌಲಭ್ಯಗಳು ಪುತ್ತೂರು ತಾಲ್ಲೂಕಿಗೆ ಇಲ್ಲವಾಗಿದೆ, ಅದೇ ರೀತಿಯಲ್ಲಿ ಆಕಾಶವಾಣಿ, ಮತ್ತು ಸ್ಥಳೀಯ ವೃತ್ತಪತ್ರಿಕೆಗಳ ಮುಖಾಂತರ ಪ್ರಚಾರ ಮಾಡುವಂತಹ ಅವಕಾಶಗಳು ಅಲ್ಲಿ ಕಡಿಮೆ. ಮತ್ತು ಕೃಷಿ ಕೂಲಿಗಾರರಿಗೆ ತಿಳುವಳಿಕೆ ಕಡಿಮೆ. ಆದಕಾರಣ ತಮ್ಮ ಯೋಜನೆಗಳಿಂದ ಯಾರಿಗೆ ಪ್ರತಿಫಲ ಸಿಗಬೇಕೋ ಅವರಿಗೆ ಸಿಗುವ ಹಾಗೆ ಮಾಡಬೇಕು. ಆದರೆ ಈಗ ಹಾಗೆ ಅವರಿಗೆ ಸಿಗುತ್ತಾ ಇಲ್ಲ ಆದುದರಿಂದ ಹೆಚ್ಚು ಪ್ರಚಾರವನ್ನು ಕೊಟ್ಟು ಯಾವ ರೀತಿಯಲ್ಲಿ ಯೋಜನೆಯನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ವಿ. ಎಲ್. ಪಾಟೀಲ್.—ಎಲ್ಲಾ ಕಡೆಗಳಲ್ಲಿಯೂ ಮತ್ತು ಪುತ್ತೂರಿನಲ್ಲಿಯೂ ಕೂಡ ಈ ಬಗ್ಗೆ ಸಾಕಷ್ಟು ಪ್ರಚಾರ ಮಾಡಲಾಗಿದೆ. ಮೊದಲು ಈ ಸೌಲಭ್ಯವನ್ನು ಳಿಗ ಜನರು ಮಾತ್ರ ತೆಗೆದುಕೊಂಡಿದ್ದು, ಈಗ ಅದು ೧೪೯ ಜನರಿಗೆ ತಲುಪಿದೆ. ಐದಾರು ತಿಂಗಳಲ್ಲಿ ಇಷ್ಟು ಹೆಚ್ಚು ಜನರು ಪಡೆದುಕೊಂಡಿದ್ದಾರೆ. ಪ್ರಚಾರ ಆಗುತ್ತಾ ಇದೆ. ಸಂಬಂಧಪಟ್ಟ ಅಧಿಕಾರಿಗಳು, ಪತ್ರಿಕೆಗಳು ಆಕಾಶವಾಣಿ ಮುಂತಾದ ಮಾಧ್ಯಮದ ಮೂಲಕ ಪ್ರಚಾರ ನಡೆದಿದೆ. ಹಾಗೆಯೇ ತಾವುಗಳು ಕೂಡಾ ಪ್ರಚಾರ ಮಾಡಿ ಜನರಿಗೆ ತಿಳಿಸಿ ಹೇಳ ಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಸರಕಾರಿ ಸೇವೆಗಾಗಿ ಕನ್ನಡವನ್ನು ಕಡ್ಡಾಯ ಮಾಡಿದಲ್ಲಿ ಅಲ್ಪ ಸಂಖ್ಯಾತರಿಗೆ ತೊಂದರೆಯಾಗುವುದು.

೧೫೫೭. **ಶ್ರೀ ಆರ್. ರೋಷನ್ ಬೇಗ್ (ಶಿವಾಜಿನಗರ).**—ಪ್ರಾಥಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರಿ ಮತ್ತು ಅರೆ ಸರ್ಕಾರಿ ಸಂಸ್ಥೆಗಳಲ್ಲಿ ನೇಮಕಾತಿಗೆ ಮೊದಲು ಕಡ್ಡಾಯ ಕನ್ನಡ ಬೇಕೆಂದು ಸರ್ಕಾರವು ಆದೇಶವನ್ನು ಹೊರಡಿಸಿದೆಯೇ ?

ಆ) ಹಾಗಿದ್ದಲ್ಲಿ ಕನ್ನಡ ಬಾರದ ಅಲ್ಪ ಸಂಖ್ಯಾತ ವರ್ಗದವರಿಗೆ ಸರ್ಕಾರದ ಯಾವುದೇ ಸೇವೆಗೆ ಸೇರುವ ಅವಕಾಶವನ್ನು ಕಿತ್ತುಗೊಂಡಂತಾಗುವುದಿಲ್ಲವೆ ?

ಇ) ಕನ್ನಡ ಬಾರದವರಿಗೆ, ಈಗಿರುವ ನಿಧಾನವನ್ನೇ ಸರ್ಕಾರವು ಇನ್ನು ೧೦ ವರ್ಷಗಳವರೆಗೆ ಮುಂದುವರೆಸುವುದೇ ?